Reg.No. M. 1550.
KODAGU' MERCARA, (Coorg).

ಕೊಡಗು

ಸಂಪಾದಕರು:-ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩-೮-೦.

ಸಂಪುಟ ೨೭ | ತಾರೀಕು ೨೭—೧೦—೧೯೪೪ನೇ ಶುಕ್ರವಾರ. | ಸಂಚಿಕೆ ೨೨

ಡಾ. ಸಯ್ಯದ್ ಮಹಮ್ಮದರ ಬಿಡುಗಡೆ.

ವರ್ಕಿಂಗ್ ಕಮಿಟಿಗೆ ರಾಜಿನಾಮೆ.

—0—

ಪಂಡಿತ ಜವಾಹರಲಾಲ್ ನೆಹರೂರವರೊಡನೆ ಒಂದೆ ಕೋಣೆಯಲ್ಲಿ ಬಂಧಿಸಲಾಗಿದ್ದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಾದ ಡಾ. ಸಯ್ಯದ್ ಮಹಮ್ಮದರನ್ನು ಸರಕಾರದವರು ಈ ತಿಂಗಳ ಪ್ರಥಮ ವಾರದಲ್ಲಿ ಬಿಡುಗಡೆ ಮಾಡಿದರು. ಇವರ ಬಿಡುಗಡೆಯಾದ ನಂತರ ಇವರು ಮಹಾತ್ಮಾ ಗಾಂಧಿಯವರೊಡನೆ ತಾ. 23ರ ವರೆಗೆ ಆರು ಬಾರಿ ಭೇಟಿ ತೆಗೆದುಕೊಂಡಿದ್ದಾರೆ. ಇವರನ್ನು ಬಿಡುಗಡೆಮಾಡಿದ್ದರ ವಿಚಾರವಾಗಿ ಇವರು ಒಂದು ಹೇಳಿಕೆಯನ್ನು ಕೊಡುತ್ತಾ ಈ ರೀತಿ ಹೇಳಿದ್ದಾರೆ.

'ಮಹಾತ್ಮಾಗಾಂಧಿಯವರಿಗೆ ವೈಸರಾಯರು ಬರೆದ ತಾ. 19-8-44ರ ಪತ್ರ ನೋಡಿದೊಡನೆ ಸೈನಿಕ ವೈಸರಾಯರಾದ ಪೇಪಲ್ಲರಿಗೆ ಕೆಲವು ಸೂಚನೆಗಳನ್ನು ಕೊಡಬೇಕೆಂದು ನನಗನಿಸಿತು. ಇವರ ಧ್ಯೇಯವಾದರೂ ಗಾಂಧೀಜಿಯವರ ಜೀವಮಾನದಲ್ಲಿ ಹಿಂದೀ ಸಮಸ್ಯೆಯ ಬಗ್ಗೆ ಒಂದು ಒಪ್ಪಂದವಾಗುವಂತಾಗಲೀ ಎಂಬುದೇ ಆಗಿತ್ತು. ನನಗೆ ಬ್ರಿಟಿಷರ ನ್ಯಾಯಬುದ್ಧಿಯಲ್ಲಿ ಇನ್ನೂ ನಂಬಿಕೆಯಿದೆ. ಇಂಗ್ಲೆಂಡಿನಲ್ಲಿಯ ನನ್ನ ವಿದ್ಯಾರ್ಥಿಜೀವನದಿಂದಲೂ ಇದು ಬೆಳೆದು ಬಂದಿದೆ. ನನಗೆ ಅನೇಕ ಬ್ರಿಟಿಷ್ ಮಹಾವ್ಯಕ್ತಿಗಳ ಸ್ನೇಹವೂ ಇದೆ. ಒಮ್ಮೆ ನಾನು ಈಗ ಬ್ರಿಟಿಷ್ ಪ್ರಧಾನರಾಗಿರುವ ಚರ್ಚಿಲ್ಲರ ಖಾಸಗಿ ಕಾರ್ಯದರ್ಶಿಯೂ ಆಗುವ ಅಭಿಲಾಷೆಯಲ್ಲಿದ್ದೆ. ಈ ರೀತಿಯ ಒಂದು ಸಂಬಂಧ ಇದ್ದ ಕಾರಣ ಹಿಂದೂದೇಶದ ವೈಸರಾಯರ ಮನಸ್ಸಿನ ಮೇಲೆ ನನ್ನ ಪತ್ರದಿಂದ ಒಳ್ಳೇ ಪರಿಣಾಮವಾದೀತೆಂದು ನಾನು ಬರೆದೆನು. ಈ ಪತ್ರವನ್ನು ನನ್ನ ಬಿಡುಗಡೆಯ ದೃಷ್ಟಿಯಿಂದ ನಾನು ಎಂದೂ ಬರೆದವನಲ್ಲ. ಈ ಕಳೆದ 30 ವರ್ಷಗಳಿಂದ ನಾನು ಹಿಂದೂದೇಶದ ಸೇವೆಯನ್ನು ನನ್ನ ಕೈಲಾದ ಮಟ್ಟಿಗೆ ಮಾಡಿರುವೆನು. ನನ್ನ ಪೂರ್ಣಧ್ಯೇಯವೆಂದರೆ ಒಳ್ಳೆ ಮುಸಲ್ಮಾನನಾಗಿ, ಒಳ್ಳೇ ಭಾರತೀಯನಾಗಿರುವದು. ಇವೆರಡು ಎಂದೂ ಒಂದಕ್ಕೊಂದು ವಿರುದ್ಧವಲ್ಲ. ನನ್ನ ಜೀವನದ ಈ ಸಂದ್ಯಾಕಾಲದಲ್ಲಿ ನನ್ನ ದೇಶದ ಸೇವೆಗೆ ತಿಲಾಂಜಲಿಕೊಡುವವನು ನಾನಲ್ಲ. ನನ್ನ ಆರೋಗ್ಯವು ಕೆಟ್ಟುಹೋಗಿದೆ. ಹೆಚ್ಚುಕಾಲ ಬದುಕುವ ಆಶೆಯೂ ಇಲ್ಲ. ಹೀಗಿರುವಾಗ ನನ್ನ ದೇಶದ, ಯಾವ ಸಂಸ್ಥೆಗೆ ಸೇರಿದ್ದರಿಂದ ಹೆಮ್ಮೆ ಗೊಂಡಿರುವೆನೋ ಆ ಸಂಸ್ಥೆಯ ಗೌರವಕ್ಕೆ ಚ್ಯುತಿಬರುವ ಕಾರ್ಯವನ್ನು ಎಂದೂ ಮಾಡಲಾರೆ. ನನ್ನ ದೇಶೀಯರು ನನ್ನ ಆಶಾವಾದವನ್ನು ನೋಡಿ ನಗಬಹುದು. ನನ್ನ ಪತ್ರವು ನಾನು ಯೋಚಿಸಿದ ಪರಿಣಾಮವನ್ನು ವೈಸರಾಯರ ಮೇಲೆ ಸದ್ಯಕ್ಕೆ ಮಾಡಲಿಲ್ಲ. ಆದರೆ ಮುಂದಾದರೂ ಅದು ಮಾಡೀತೆಂದು ನಂಬುತ್ತೇನೆ. ನಾನು ಪತ್ರ ಬರೆಯುವಾಗ ನನ್ನ ಮಿತ್ರರಿಗೆ ಅರುವಿಕೆ ಕೊಡದೆ ಬರೆದದ್ದು ನನ್ನ ತಪ್ಪು. ಆದರೆ ಮಿತ್ರರು ಈ ಪತ್ರ ನೋಡಿದ್ದರೆ ಅದನ್ನು ಕಳುಹಿಸಲು ಸಾಧ್ಯವಿದ್ದಿತೋ ಏನೋ. ಹೇಗೂ ಒಂದು ರೀತಿಯ ತೀರ್ಮಾನವಾಗಬೇಕೆಂದು ನಾನು ಈ ಪತ್ರ ಬರೆದೆನು. ಈ ಪತ್ರದಲ್ಲಿ ಕಾಂಗ್ರೆಸಿನ ಆಗಸ್ಟ್ ನಿರ್ಣಯಕ್ಕೂ ನನಗೂ ಇರುವ ಬೇಧವನ್ನು ವಿವರಿಸಿದ್ದೆನು. 1942ನೇ ಆಗಸ್ಟ್ 8ರಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ಈ ಠರಾವಿಗೆ ವಿರುದ್ಧವಾಗಿ ಮತಾಡಲು ಅನುವಾಗುವಂತೆ ಆಗಸ್ಟ್ 8ನೇ ಮಧ್ಯಾಹ್ನ ನಾನು ವರ್ಕಿಂಗ್ ಸಮಿತಿ ಸದಸ್ಯತನಕ್ಕೆ ರಾಜಿನಾಮೆಯಿತ್ತೆ. ಸಾಯಂಕಾಲ ಮೀಟಿಂಗು ನಡೆದು ಬೆಳಗಾಗುವದರೊಳಗೆ ಸರ್ವರೂ ದಸ್ತಗಿರಿ ಮಾಡಿದ ಕಾರಣ ಈ ವಿಚಾರ ಪ್ರಕಟವಾಗಲು ಆಸ್ಪದವೊದಗಲಿಲ್ಲ. ನನ್ನ ದೇಶೀಯರು ದೇಶಕ್ಕೆ ಅನರ್ಥಕಾರಿಯೂ ಯಾವದೇ ಪರ್ತನೆಯನ್ನು ನಾನು ಕೈಕೊಂಡಿಲ್ಲ ಎಂಬುದನ್ನು ತಿಳಿಯುವರೆಂದು ನಂಬುತ್ತೇನೆ ನನ್ನ ದೇಶೀಯರು ನನ್ನ ಈ ವರ್ತನೆಗೆ ಯಾವದೇ ರೀತಿಯ ಕಲ್ಪನೆಯನ್ನು ಹಚ್ಚಿದರೂ ದೇವರು ನನ್ನನ್ನು ಎಷ್ಟರ ವರೆಗೆ ಬದುಕಿಸಿರುವನೋ, ಎಲ್ಲಿಯ ವರೆಗೆ ನನಗೆ ಕೆಲಸ ಮಾಡಲು ಆರೋಗ್ಯವಿರುವದೋ ಆ ವರೆಗೆ ಯಾವ ಸ್ವಾತಂತ್ರ್ಯಕ್ಕಾಗಿ ನನ್ನ ಜೀವನವನ್ನೇ ಧಾರೆಯೆರೆದಿರುವೆನೋ ಆ ಪದಕ್ಕಾಗಿ ಮತ್ತು ನನ್ನ ನಾಡಿನ ಸೇವೆಗಾಗಿ ಚಿರಂತನ ದುಡಿಯುವೆನು.'

ಪತ್ರದ ಸಾರ.

ನಾನು ಈ ಪತ್ರವನ್ನು ಬರೆಯುತ್ತಿರುವದು ನನ್ನ ಬಿಡುಗಡೆಯ ದೃಷ್ಟಿಯಿಂದಲ್ಲ. ಸರಕಾರವು ತಪ್ಪು ದೃಷ್ಟಿಯಿಂದ ಹಲವರನ್ನು ದಸ್ತಗಿರಿ ಮಾಡಿದೆ. ನಾನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಆಗಸ್ಟ್ ಗೊತ್ತುವಳಿಗೆ ವಿರುದ್ಧಮಾಡಿದೆನು. ನಾವು ಯಾವುದೇ ಸದ್ಬುದ್ಧಿಯಿಂದ ಗೊತ್ತುವಳಿಯನ್ನು ಮಾಡಿದರೂ ಸಹ ಬ್ರಿಟಿಷ್ ಸರಕಾರವು ಅದನ್ನು ತಪ್ಪಭಿಪ್ರಾಯದಿಂದ ತಿಳಿದುಕೊಳ್ಳುವದೆಂದೂ ಅವರ ಬಿಕ್ಕಟ್ಟನ್ನು ನಮ್ಮ ಸಂದರ್ಭವಾಗಿ ಉಪಯೋಗಿಸಿಕೊಂಡರೆಂದು ಹೇಳುವದೆಂದೂ ನಾನು ಸೂಚಿಸಿ ಠರಾವಿಗೆ ವಿರೋಧಿಸಿದೆ. ಆದರೆ ಠರಾವು ವಾಸಾಗಿ ಅಖಿಲಭಾರತ ಕಾಂಗ್ರೆಸ್ ಸಮಿತಿಯು ಮುಂದೆ ಬಂತು. ಅಲ್ಲಿ ಅದನ್ನು ನಾನು ವಿರೋಧಿಸುವ ದೃಷ್ಟಿಯಿಂದ ಮೀಟಿಂಗಿಗೆ ಮೊದಲೇ ನನ್ನ ವರ್ಕಿಂಗ್ ಕಮಿಟಿ ಸದಸ್ಯತನಕ್ಕೆ ರಾಜಿನಾಮೆಯಿತ್ತೆನು. ಅಖಿಲಭಾರತ ಕಾಂಗ್ರೆಸ್ ಸಮಿತಿಯಲ್ಲೂ ಠರಾವು ಪಾಸಾಯಿತು. ಯುದ್ಧದ ಈ ಸಂದರ್ಭದಲ್ಲಿ ನಾವು ಶತ್ರುಗಳನ್ನಡಗಿಸಲು ಸಹಾಯಕರಾಗುವ ಬದಲು ಈ ರೀತಿಯ ಗೊತ್ತುವಳಿ ಯೋಗ್ಯವಲ್ಲವೆಂಬ ನನ್ನ ಅಭಿಪ್ರಾಯವು ಸರಕಾರಕ್ಕೆ ತಿಳಿದಿದ್ದರೂ ಎಲ್ಲಾ ಕಾಂಗ್ರೆಸ್ ಸದಸ್ಯರೊಡನೆ ನನ್ನನ್ನು ದಸ್ತಗಿರಿಯೂ ತಾ. 9.8.42ರ ಬೆಳಿಗ್ಗೆ ಆಯಿತು. ಕಾಂಗ್ರೆಸು ಠರಾವನ್ನು ಪಾಸುಮಾಡಿದ್ದರೂ ಅದು ಎಂದೂ ಕಾಯಿದೆಭಂಗ ಚಳವಳವನ್ನು ಹೊಡಿಲ್ಲ. ಅದು ಇನ್ನೂ ಸಂಧಾನ ಪ್ರಯತ್ನದಲ್ಲೇ ಇದ್ದಾಗ ಸರಕಾರವು ಅದರ ಮೇಲೆ ಅನಿರೀಕ್ಷಿತವಾಗಿ ದೈಯೆತ್ತಿತು.

ಇಂಗ್ಲಿಷ್ ಜನರು ಒಂದು ಒಳ್ಳೆಯ ಕೆಲಸ ಮಾಡಬೇಕಾದರೆ ಅದರಿಂದ ಹಿತವಾಗುವ ಮನುಷ್ಯನಿಗೆ ಬೇಸರ ಹುಟ್ಟುವಂಥಾ ಪರಿಸ್ಥಿತಿ ಬಂದ ಮೇಲೆ ಮಾಡುವರು. ಆ ಮನುಷ್ಯನು ಜಿಗುಪ್ಸೆಯಿಂದ ಅದನ್ನು ತಿರಸ್ಕರಿಸಿದರೆ ಮತ್ತೆ ತಮ್ಮ ಉದಾರತೆಯನ್ನು ಹೊಗಳಿ ಅತನನ್ನು ಹಳಿಯುವರು. ಇಂದಿನ ರಾಜಕೀಯ ಚರಿತ್ರೆಯಲ್ಲಿ ಯಾವುದೋ ಅದೃಷ್ಟ ಫಲದಿಂದ ಬ್ರಿಟಿಷರು ಈ ವರೆಗೆ ತೆವಳಿಕೊಂಡು ಸಾಗಿದ್ದಾರೆ. ಇದರಿಂದ ತಾವು ಯಾವ ಸಂದರ್ಭದಲ್ಲೂ ಜಯಿಸಬಲ್ಲೆವೆಂಬ ಭಾವನೆ ಬ್ರಿಟಿಷರಲ್ಲಿ ಇರಬಹುದು. ಇದಕ್ಕೆ ನಾವು ಅವರನ್ನು ದೂಷಿಸುವುದಿಲ್ಲ. ಕಳೆದ ನಾಲ್ಕು ಶತಮಾನದಿಂದ ಯೂರೋಪಿನ ಶತ್ರುಗಳು ಅವರ ಮುಂದೆ ಧೂಳು ತಿಂದಿದ್ದಾರೆ. ಯಾವ ಜನಾಂಗವಾದರೂ ಇದಕ್ಕೆ ಹೆಮ್ಮೆಪಡಬೇಕು. ಆದರೆ ಈ ಅದೃಷ್ಟ, ಶಕ್ತಿ ಶಾಶ್ವತವಿರಲಾರದು. ಅವರ ಶತ್ರುಗಳು ಶಾಶ್ವತ ನಿರ್ಬಲರಾಗಿಯೇ ಉಳಿಯಲಾರರು. ಬ್ರಿಟಿಷರು ಸೈನಿಕ ವೃತ್ತಿಯಲ್ಲಿ ಹೆಸರು ಪಡೆದಿದ್ದಾರೆ. ಈಗ ಅವರು ನೈತಿಕ ವೃತ್ತಿಯಲ್ಲಿಯೂ ಕೀರ್ತಿ ಪಡೆಯಬೇಕು. ಆದ್ದರಿಂದ ಇತರ ಜನಾಂಗಗಳ ಬಗ್ಗೆ ತಮ್ಮ ನೀತಿಯನ್ನು ಬದಲು ಮಾಡಬೇಕು. 1939ರಲ್ಲಿ ಹಿಂದೂ ಸಮಸ್ಯೆಯನ್ನು ಬಗೆಹರಿಸುವ ಬಗೆಗೆ ಲಾರ್ಡ್ ಲಿನ್‌ಲಿತ್ಗೋ ರವರಿಗೆ ನಾನು ಕೆಲವು ಸೂಚನೆಗಳನ್ನು ಮಾಡಿದ್ದೆ. ಅವರು ಅವುಗಳನ್ನು ಹೊಗಳಿ ಒಪ್ಪಿದರು. ಆದರೆ ಅವನ್ನು ಕಾರ್ಯರೂಪದಲ್ಲಿ ತರಲು ಅವರ ಕೈ ಸ್ವತಂತ್ರವಿರಲಿಲ್ಲ. ಈಗ ನಾನು ನಿಮಗೆ ಅದೇ ಸೂಚನೆಗಳನ್ನು ಮಾಡುತ್ತೇನೆ. ನಿಮಗೆ ನಾನು ಹೊಸಬನು. ಆದರೂ ಗಾಂಧೀಜಿಯವರ ಜೀವಮಾನದಲ್ಲಿಯೇ ಭಾರತ ಸಮಸ್ಯೆಯು ಬಗೆಹರಿಯುವ ಪ್ರಯತ್ನ ಮಾಡಬೇಕು. ಇದು ಒಬ್ಬ ಯೂರೋಪಿಯನಿನಿಗೆ ಮಹಾತ್ಮ ಗಾಂಧಿಯವರ ಅಭಿಪ್ರಾಯಗಳು ಒಡೆಯಲಾರದ ಒಗಟುಗಳಾಗಿ ತೋರಿಬಿಸಿಯೂವು. ಆದರೆ ಈ ಮಹಾವ್ಯಕ್ತಿಯ ಜೀವಮಾನದಲ್ಲಿ ಒಂದು ಒಪ್ಪಂದಕ್ಕೆ ಬ್ಲೂರಿದ್ದರೆ ಭಾರತ ಜನತೆಯಲ್ಲಿ ಅವಿಶ್ವಾಸ ದ್ವೇಷಗಳು ಬ್ರಿಟಿಷರ ಬಗ್ಗೆ ಹೆಚ್ಚಿ ನೂರ್ಮಡಿಯಾಗುವು. ಗಾಂಧೀಜಿಯವರ ನಂತರ ಭಾರತವನ್ನು ಹತೋಟಿಯಲ್ಲಿಡುವದು ಭಾರತದ ಸ್ನೇಹವನ್ನುಳಿಸಿಕೊಳ್ಳುವದು ಪ್ರಯೋಸವಾಗಬಹುದು."

ಕೊ ಡ ಗು

ತಾ. ೨೭-೧೦-೧೯೪೪ನೇ ಶುಕ್ರವಾರ

ಪುನಹ ಉಪವಾಸವೇ?

ಮಹಾತ್ಮ ಗಾಂಧಿಯವರು ತಮ್ಮ ಹೇಳಿಕೆಯೊಂದರಲ್ಲಿ—'ಮುಂದೆ ಒಂದು ಉಪವಾಸವು ನನಗೆ ಕಟ್ಟಡಲ್ಪಟ್ಟಿದೆ'ಯೆಂದು ಹೇಳಿರುವರು. ಮಹಾತ್ಮ ಗಾಂಧಿಯವರು ಉಪವಾಸ ಕೈಕೊಳ್ಳುವ ಮಾತು ಬಂದಾಗ ಇಡೀ ಭಾರತೀಯರ ಮನಸ್ಸು ಪರಿತಾಪದಿಂದ ಅಲ್ಲೋಲಕಲ್ಲೋಲವಾಗುತ್ತದೆ. ವಿದೇಶೀಯರೂ ಸಹ ಈ ವಿಚಾರದಲ್ಲಿ ಉದ್ವಿಗ್ನರಾಗುತ್ತಾರೆ. ಬ್ರಿಟಿಷ್ ಸರಕಾರವೂ ಇದರಿಂದ ಗಾಬರಿಗೊಳ್ಳುತ್ತದೆ. ಉಪವಾಸವು ಅತೀ ತೀಕ್ಷ್ಣವಾದ ಅಸ್ತ್ರ. ಅದರಲ್ಲೂ ಮಹಾತ್ಮ ಗಾಂಧಿಯವರಂಥಾ ಆದರ್ಶಜೀವಿಗಳ ಕೈಯಲ್ಲಿ ಅದು ಜಗತ್ತನ್ನೇ ನಡುಗಿಸಬಲ್ಲುದು. ಮಹಾತ್ಮರು ಈ ಶಸ್ತ್ರವನ್ನು ತಮ್ಮ ಈ ವರೆಗಿನ ಜೀವನದಲ್ಲಿ ಹಲವು ಬಾರಿ ಉಪಯೋಗಿಸಿದ್ದಾರೆ. ಪ್ರತಿ ಬಾರಿಯೂ ಇದರಿಂದ ಅನರ್ಘನೀಯವಾದ ಜಯವನ್ನು ಪಡೆದಿದ್ದಾರೆ. ಮಹಾತ್ಮರು ಈ ಅಸ್ತ್ರವನ್ನು ಉಪಯೋಗಿಸುವದು ಜಯಪಡೆಯುವ ಕಾಂಕ್ಷೆಯಿಂದಲ್ಲ. ಯಾವದೇ ಧ್ಯೇಯಕ್ಕಾಗಿ ಕೈಕೊಳ್ಳುವ ಉಪವಾಸವು ಉಚ್ಚ ತರಗತಿಯದಲ್ಲ. ಮಹಾತ್ಮರ ಉಪವಾಸಗಳು ಮತ್ತೊಬ್ಬರನ್ನು ಬಲಾತ್ಕರಿಸಲಿಕ್ಕಲ್ಲ. ತಮ್ಮ ಆತ್ಮಪರಿಶುದ್ಧತೆಗಾಗಿ, ನಿಶ್ಚಲ ತಪಸ್ಸಿಗಾಗಿ.

ಮಹಾತ್ಮರ ಜೀವ ಅಹಿಂಸೆಯ ನೆರಳಲ್ಲಿ ಬೆಳೆದುದು. ಸರ್ವರೂ ಸಮಾನರು; ಸರ್ವರೂ ಜಗತ್ತಿನ ಸುಖದುಃಖಗಳಿಗೆ ಸಮಭಾಗಿಗಳು ಎಂಬ ಸಮನ್ವಯದೃಷ್ಟಿಯುಳ್ಳದ್ದು. ಆದರೆ ಜಗತ್ತಿನ ರಣಕ್ಷೇತ್ರದಲ್ಲಿ ನಡೆಯುತ್ತಿರುವ ಹಿಂಸಾಕೃತ್ಯಗಳು, ಸಾಮಾಜಿಕ ಕ್ಷೇತ್ರದಲ್ಲಿಯ ಪಾಪಾಚರಣೆಗಳು, ಕೌಟುಂಬಿಕ ಜೀವನದಲ್ಲಿಯ ಹಗೆತನ ಮೋಸಗಳು ಧಾರ್ಮಿಕ ಜೀವಿ ಮಹಾತ್ಮರ ಮನಸ್ಸನ್ನು ಕಲಕಿರುವದರಲ್ಲಿ ಸಂಶಯವಿಲ್ಲ. ಇದರಿಂದ ಶುದ್ಧಿ ಪಡೆಯಲಿಕ್ಕಾಗಿ, ಹಿಂಸಾಕೃತ್ಯಗಳ ವಿರುದ್ಧ ಅವರ ಹೃದಯದಲ್ಲಿ ದಂಗೆ ಏಳುತ್ತಿರುವ ಅಹಿಂಸದ ಸಾಧನೆಗಾಗಿ ಉಪವಾಸ ಕೈಕೊಳ್ಳಲು ಅವರ ಮನಸ್ಸು ಹಾತೊರೆಯುತ್ತಿದೆ. ಸಾರ್ವತ್ರಿಕ ಹಬ್ಬಿರುವ ಹಿಂಸಾಂಧಕಾರದ ಮಧ್ಯೆ ಅಹಿಂಸೆಯ ದಿವ್ಯ ಪ್ರಭೆಯನ್ನು ಬೀರುವ ಮಾರ್ಗ ಕೈಕೊಳ್ಳಲಿದ್ದಾರೆಂಬುದು ಅವರ ಹೇಳಿಕೆಯಿಂದ ಗೋಚರವಾಗುವದು. ಇಂದು ಸಾರ್ವತ್ರಿಕ ಹಬ್ಬಿರುವ ಹಿಂಸೆಯು ತೊಲಗಿ ಅಹಿಂಸೆಯ ಅಮರ ಪ್ರಭೆಯು ದರ್ಶನವಾಗಲಿ ಎಂಬ ಕಾಂಕ್ಷೆ ಪ್ರತಿಯೊಬ್ಬನಿಗೂ ಇದೆ. ಆದರೆ ಇದರ ಸಾಧನೆಗಾಗಿ ಮಹಾತ್ಮರು ಈ ಕಡೇ ಅಸ್ತ್ರವಾದ ಉಪವಾಸವನ್ನು ಪ್ರಯೋಗಿಸದಿರಲಿ. ಎಪ್ಪತ್ತೈದು ವರ್ಷಗಳನ್ನು ದಾಟಿದ ಮಹಾತ್ಮರ ಪಾರ್ಥಿವ ಶರೀರವು ಈ ಅಗ್ನಿಪರೀಕ್ಷೆಯನ್ನು ಸಹಿಸಲಾರದು. ಜಗತ್ತಿನ ವಿಭೂತಿ ಪುರುಷರಾದ ಮಹಾತ್ಮರ ಜೀವನ ಧ್ಯೇಯವಾದ ಅಹಿಂಸದ ಪ್ರಭೆಯು ಪ್ರತಿಯೊಬ್ಬರ ಹೃದಯದಲ್ಲಿ ಪ್ರತಿಬಿಂಬಿಸಿ ಹಿಂಸೆಯು ನಾಮಾವಶೇಷವಾಗಲಿ. ಮಹಾತ್ಮರು ಉಪವಾಸ ಕೈಕೊಳ್ಳದಂತಾಗಲಿ.

ಒಳದೇಶ.

ಕೊಡಗು ಮಂಗಳೂರು ಪ್ರಾಂತ ಸಮಿತಿಯ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ತಾ. 29-10-44 ರಿಂದ 4-11-44ರ ವರೆಗೆ ಮಡಿಕೇರಿ ನೇದಾಂತ ಮಂದಿರದಲ್ಲಿ ನಾಡಹಬ್ಬವು ಜರಗುವದು. ಅನೇಕ ಉಡ್ಯ ಮಹನಿಯರ ಭಾಷಣಗಳು ಏರ್ಪಟ್ಟಿವೆ. ಪ್ರಥಮ ದಿನ ಶ್ರೀ ಬಿ. ಎಸ್. ಕುಶಾಲಪ್ಪನವರು, ಎರಡನೆಯ ದಿನ ರಾ. ಬ. ಕೆ. ಟಿ. ಉತ್ತಪ್ಪನವರು, ಮೂರನೆಯ ದಿನ ಶ್ರೀ ಕೆ. ಪಿ. ಕುಟ್ಟಪ್ಪನವರು, ನಾಲ್ಕನೆ ದಿನ ರಾ. ಸಾ. ಎನ್. ಸಿ. ಸುಬ್ಬಯ್ಯನವರು, ಐದನೆ ದಿನ ನಿಡ್ಯಮನೆ ಮುದ್ದಪ್ಪನವರು, ಆರನೆ ದಿನ ಶ್ರೀ ಕೆ. ಮಲ್ಲಪ್ಪನವರು, ಏಳನೆ ದಿನ ಶ್ರೀ ಐ. ಸಿ. ಸುಬ್ಬಯ್ಯನವರು ಅಧ್ಯಕ್ಷತೆವಹಿಸುವರು. ಸರ್ವರಿಗೂ ಆಮಂತ್ರಣವಿದೆ.

ಅಕ್ಟೋಬರ್ ತಾರೀಕು 21 ರಿಂದ ಸಕ್ಕರೆಯನ್ನು 8 ಮಣದ ಯೂ 224 ಪೌಂಡಿನ ಚೀಲಕ್ಕೆ ರೂ. 51-2-6 ರಂತೆಯೂ, ವೀಸಕ್ಕೆ 0-13-0 ಆಣೆಯಂತೆಯೂ, ಪೌಂಡಿಗೆ 0-3-9 ಯಂತೆಯೂ ಮಾರಬೇಕೆಂದು ನಿಯಂತ್ರಿಸಲಾಗಿದೆ. ಒಂದು ಮಣಕ್ಕೆ ಹೆಚ್ಚಿನ ಸಕ್ಕರೆ ಕೊಂಡುಕೊಳ್ಳುವವರಿಗೆ ರಶೀದರ ಕೊಡಬೇಕು.

ಕೋಳಿಕಾಳಗದಲ್ಲಿ ಕೋಳಿಯ ಕಾಲಿಗೆ ಕಟ್ಟುವ ಕತ್ತಿ ತಗಲಿ ಗಾಯವಾಗಿ ಕೆದಕಲ್ಲಿನ ಬಂಟ್ರ ಧೂಮ ಎಂಬವನು ಮಡಿಕೇರಿ ಆಸ್ಪತ್ರೆಯಲ್ಲಿ ಮೃತನಾದನು.

ಇಂಡಿಯಾ ಸರಕಾರದವರು ಕರ್ಪೂರ ಬಿಲ್ಲೆಗಳ ಪರಮಾವಧಿ ಬೆಲೆಯನ್ನು ನಿರುಕು ಮಾಡಿರುವದನ್ನು ಕೊಡಗು ಸರಕಾರದವರು ಜಾರಿಗೆ ತಂದಿರುವರು.

ಸ್ಪೀಸ್ ರೇಜರ್ ಬ್ಲೇಡುಗಳ ಪರಮಾವಧಿ ಬೆಲೆಯನ್ನು ಇಂಡಿಯಾ ಸರಕಾರದವರು ನಿರುಕು ಮಾಡಿರುವದನ್ನು ಕೊಡಗು ಸರಕಾರವು ಜಾರಿಗೆ ತಂದಿರುವರು.

ಡ್ರಗ್ಸ್ ಕಂಟ್ರೋಲ್ ಆರ್ಡರಿನಲ್ಲಿ ಇಂಡಿಯಾ ಸರಕಾರದವರು ಕೆಲವು ತಿದ್ದುಪಡಿ ಮಾಡಿರುವದನ್ನು ಕೊಡಗು ಸರಕಾರದವರು ಪ್ರಕಟಿಸಿರುವರು.

ದುರ್ಭಾಗಿ ಚೀನ.

ದುರ್ಭಾಗಿ ಚೀನ! ಆದರ ಪ್ರಾಮುಖ್ಯ ಕೈಗಾರಿಕಾ ಕೇಂದ್ರಗಳಲ್ಲಿ ಹಲವು ಜಪಾನಿನ ವಶದಲ್ಲಿವೆ. ಚೀನದ ಮುಖ್ಯ ರೈಲ್ವೆಗಳನ್ನು ಜಪಾನರು ವಶಪಡಿಸಿಕೊಂಡಿರುವರು ಅಥವಾ ಕಡಿದಿರುವರು. ಉಳಿದ ರಸ್ತೆಗಳು ಅಪಾಯಕರವೆನಿಸುವಷ್ಟು ಅಸಮಂಜಸ ಸ್ಥಿತಿಯಲ್ಲಿವೆ.

ಚೀನದಲ್ಲಿಂದು ಸುಮಾರು 20 ಸಾವಿರ ಮೋಟಾರು ಬಂಡಿಗಳು ದುರುಸ್ತಿ ಸ್ಥಿತಿಯಲ್ಲಿವೆ. ಇವುಗಳಲ್ಲಿ ಹಲವು ಬಹು ಕಾಲದ ಉಪಯೋಗದಿಂದ ಸವೆದು ಜರ್ಝರಿತವಾಗಿವೆ. ಬರ್ಮಾ ರಸ್ತೆಯು ಮುಚ್ಚಲ್ಪಟ್ಟಂದಿನಿಂದ, ಚೀನವು ಬರಿದಾಗುತ್ತಿರುವ ತನ್ನ ಮೋಟಾರು ಬಂಡಿಗಳ ಸ್ಥಾನಕನ್ನು ನಮೀಕರಿಸಿಕೊಳ್ಳಲಾಗದೆ ಪೇಚಾಡುತ್ತಿದೆ.

ಇಂದು ಅನಾಕ್ರಮಿತ ಚೀನದಲ್ಲಿ ಒಟ್ಟಿಗೆ ಉಪಯೋಗದಲ್ಲಿರುವ ಮೋಟಾರು ಬಂಡಿಗಳು 6 ಸಾವಿರಕ್ಕಿಂತ ಹೆಚ್ಚಿಲ್ಲ! ಈ ಬಂಡಿಗಳೇ ಯುದ್ಧದ ಆವಶ್ಯಕ ಉಪಕರಣಗಳನ್ನು, ಜನರಿಗೆ ಯೂನತ್ಕೂ ಸರಬರಾಯಿಯನ್ನು—(200 ಮಿಲಿಯ ಜನರಿಗೆ!) ಮಾಡುತ್ತಿರಬೇಕು! ಏನಿದು ದುರವಸ್ಥೆ! ಅಮೇರಿಕಾದ ಚಿಕಾಗೋ ನಗರವೊಂದರಲ್ಲೇ—ಕೇವಲ 4 ಮಿಲಿಯ ಜನರ ಅವಶ್ಯಕತೆಗಳನ್ನು ಪೂರೈಸಲು 63 ಸಾವಿರ ನೋಟಾರು ಬಂಡಿಗಳಿವೆಯಂತೆ! ಅದಕ್ಕಿಂತ ಐವತ್ತು ಪಾಲು ಹೆಚ್ಚು ಜನರಿಗೆ ಮತ್ತು ಯುದ್ಧದ ಸರಬರಾಯಿಗೆ ಹತ್ತನೇ ಒಂದಂಶ ಬಂಡಿಗಳಾದರೂ ಚೀನದಲ್ಲಿ ಇಲ್ಲ! ಈ ಮಹಾ ಭಯಂಕರ ದುಃಸ್ಥಿತಿಯಲ್ಲಿ, ಪ್ರಬಲ ಶತ್ರುವನ್ನು ಚೀನವು ಕಾದಾಡುತ್ತಿದೆ.

ಬಂಡಿಗಳಿಲ್ಲದಿದ್ದಾಗ ಪಶುಗಳೂ, ಮನುಷ್ಯರೂ ಆ ಕೆಲಸ ಮಾಡಬೇಕಾಗುವುದು. ಚೀನಾದಲ್ಲಿಂದು ಕೆಲವು ಪಶುಗಳೂ, ಸಾವಿರಾರು ಕೂಲಿಯಾಳುಗಳೂ ಸರಕು ರವಾನೆಯ ಕೆಲಸಕ್ಕೆ ನಿಯೋಜಿತರಾಗಿರುವರು.

ರವಾನೆಯು ತೊಂದರೆಯಿಲ್ಲದ ಎಲ್ಲಾ ಕಡೆಗಳಲ್ಲಿ ಸರಕುಗಳ ಧಾರಣೆಗಗಳು ಏರಿವೆ; ಆಹಾರ ಮೊದಲಾದ ವಸ್ತುಗಳ ಅಭಾವವೂ ಹೆಚ್ಚಿದೆ.

ಚೀನಿಯರ ಜೀವನ ವೆಚ್ಚಗಳ ಪರಮಗತಿಯು ಯಾವಾಗಲೂ ನಿರಾಡಂಬರವಾದುದು. ಅತ್ಯಲ್ಪ ಹಣದಲ್ಲಿ, ಅತ್ಯಲ್ಪ ಉಡುಪಿನಲ್ಲಿ, ಅತ್ಯಲ್ಪವಾದ ಆಕ್ಕಿ ಮೊದಲಾದುವುಗಳಲ್ಲಿ ಇವರು ಜೀವನ ಮಾಡಬಲ್ಲರು. ಅಶನ-ವಸನಕ್ಕೆ ಕೊಂಚ ಅಭಾವವಾದರೆ ಸಹಿಸಬಲ್ಲವರು. ಆದರೆ ಇಂದಿನ ಸ್ಥಿತಿಯು 'ಅಲ್ಪ ಅಭಾವ'ವಲ್ಲ; ಪೂರ್ಣ ಅಭಾವ; ಆ ಅಭಾವದ ಕರಾಳ ರೂಪ. ಆಕ್ಕಿ ಬಟ್ಟಲು ಹೋಯಿತು; ಉಡಲು ಹರಕು ಚಿಂದಿ!

ಚೀನೀಯರ ಕಾದಾಟದ ಶಕ್ತಿಯು, ಉಪಕರಣಗಳ ಕೊರತೆಯಿಂದ ಪರಿಮಿತವಾಗಿದೆ. ಜಪಾನರನ್ನು ಕಾದಾಡುವ ವೀರಾವೇಶ ಅವರಲ್ಲಿದೆ; ಮಾತೃಭೂಮಿಯನ್ನು ರಕ್ಷಿಸುವ ದೇಶಪ್ರೇಮವಿದೆ. ಇದ್ದುದರಲ್ಲಿ ಸಹಿಸಿ, ಹೊರೆತುದರಿಂದ ಸಾಧ್ಯವಿದ್ದಷ್ಟು ಶತ್ರುವನ್ನು ಕಾದಾಡುತ್ತಿದ್ದಾರೆ.

ಬರ್ಮಾ ರಸ್ತೆ ಮುಚ್ಚಲ್ಪಟ್ಟು ನಾಲ್ಕು ವರ್ಷಗಳಾದವು. ಜಪಾನು, ಚೀನಕ್ಕೆ ಸರಬರಾಯಿ ತಲಪಬಹುದ್ದಾದ ಎಲ್ಲ ರಸ್ತೆಗಳನ್ನು ಮುಚ್ಚಿಬಿಟ್ಟಿದೆ. ಹೀಗೆ ರಸ್ತೆಗಳನ್ನು ಮುಚ್ಚುವುದೆಂದರೇನೆಂಬುವುದನ್ನು ವಿವರಿಸಬೇಕಿಲ್ಲ. ಚೀನಕ್ಕೆ ಅದು ಭಯಂಕರವಾದ ಬಲಿದಾನ ಮತ್ತು ಕಡುದಾರಿದ್ರ್ಯ.

ಚೀನದ ಪರಿಸ್ಥಿತಿಯಿಂದು ವೈಷಮ್ಯಕ್ಕೆ ತಲುಪಿದೆ; ಆದರೂ ಪೂರ್ಣ ನಿರಾಶೆಯಿಲ್ಲ. ಚೀನದ ಬದುಕು ಇಂದು ಅಮೇರಿಕಾದ ಬದುಕೂ ಹೌದು. ಜಪಾನಿನೊಡನೆ ಯುದ್ಧವನ್ನು ಒಂದೊಂದು ದಿನ ಬೆಳೆಸುವುದೂ ಇಷ್ಟಿಷ್ಟು ಹೆಚ್ಚು ಅಮೇರಿಕನ್ ನೆತ್ತರು ಸುರಿಸಿದಂತೆ! ಹಾಗೆಯೇ ಚೀನಾವನ್ನು ದಣಿಸುವ ಪ್ರಶ್ನೆಯೂ ಹೌದು. ಚೀನದಲ್ಲಿನ ಇಂದಿನ ಯುದ್ಧದ ಅರ್ಥ—ಜಪಾನ ಪರಾಜಯ ಮಾತ್ರವಲ್ಲ; ಮುಂದಿನ ಜಗಚ್ಶಾಂತಿಯೂ ಹೌದು. ಚೀನಕ್ಕೆ ಹೇಗೂ ಸರಕುಗಳ ಸರಬರಾಯಿಯಾಗಬೇಕು; ಚೀನದ ಕೈಗಾರಿಕೆಗಳು ವೃದ್ಧಿ ಹೊಂದಬೇಕು. ಚೀನವು ಐಕ್ಯವಾಗಿ, ಪ್ರಜಾಸತ್ತೆಯ ರಾಜ್ಯವಾಗಿ ಶೋಭಿಸಬೇಕು. 'ಪ್ರಭಾತ'

'ಗೌರವಕ್ಕೆ ಯೋಗ್ಯ ಶರತ್ತುಗಳಲ್ಲ.'

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಾದ ಪಂಡಿತ ಜವಾಹರಲಾಲ್‌ನೆಹರೂ, ಜೆ. ಬಿ. ಕೃಪಾಲಿನಿ, ಡಾ. ಪಟ್ಟಾಭಿ ಸೀತಾರಾಮಯ್ಯ ಇವರುಗಳು ತಮ್ಮನ್ನು ತಮ್ಮ ಬಂಧುಬಳಗದವರು ಭೇಟಿಮಾಡಬಹುದೆಂದು ಸರಕಾರವು ಕೊಟ್ಟ ಅನುಕೂಲತೆಯು ಕೈದಿಗಳಾಗಿರುವವರ ಮತ್ತು ಭೇಟಿಗೆ ಬರುವವರ ಗೌರವಕ್ಕೆ ಯೋಗ್ಯವಾದ ಶರತ್ತುಗಳಿಂದ ಕೂಡಿಲ್ಲವೆಂದು ಭೇಟಿಯ ಅವಕಾಶವನ್ನು ತಿರಸ್ಕರಿಸಿರುವರು.

ಮನೆ ಮೂರಾಟಕ್ಕಿದೆ.

ಮಡಿಕೇರಿ ಹೈಸ್ಕೂಲು ರಸ್ತೆ ಕ್ರಿಕೆಟ್ ಮೈದಾನಕ್ಕೆ ಪುಟ್ಟ ಮಂಗ್ಳೂರು ಹಂಚು ಹಾಕಿದ ಮನೆ, ಪ್ರತ್ಯೇಕ ಅಡಿಗೆ ಮನೆ, ಹೊರಮನೆ, ಮೋಟಾರ್ ಶೆಡ್, ಕಲ್ಲು ಕಟ್ಟಿದ ಬಾವಿ, ಸುಮಾರು 1¾ ಏಕ್ರೆ ಬಾಣೆ ಹಡ್ಲು, 40 ಬಟ್ಟೆ ಹಡ್ಲು ಭೂಮಿ ಇವು ಮೂರಾಟಕ್ಕಿವೆ. ದನ ಕರಗಳನ್ನು ಸಾಕಲಿಕ್ಕೆ ಬಹು ಅನುಕೂಲವಾಗಿದೆ. ಆರೋಗ್ಯಕರ ಆವರಣದೆಲ್ಲಿದೆ. ಹೆಚ್ಚಿನ ವಿವರಕ್ಕೆ ಈ ಪತ್ತೆಗೆ ಬರೆಯಿರಿ.

'X'

2-1. C/o. ಸಂಪಾದಕರು,
'ಕೊಡಗು' ಮಡಿಕೇರಿ.

ಣ ಭೇರಿ.

ಜರ್ಮನಿಯ ಪಶ್ಚಿಮ ಗಡಿಯ
ಯುದ್ಧವು ಭೀಕರವಾಗಿ ನಡೆಯುತ್ತಿ
. ಕಳೆದ ವಾರ ಏಚೆನ್ ನಗರದ
ತ್ತು ಕದನ ನಡೆಯುತ್ತಿತ್ತು. ಜ
ರ್ಮನ್ನರು ಬಹು ವೀರಾವೇಶದಿಂದ
ದಿದರು. ಎರಡು ಕಡೆಯವರಿಗೂ
ಣಿತ ನಷ್ಟವಾಗಿದೆ. ಇತ್ತಲಾಗಿ
ನಗರವು ಅಮೇರಿಕನರ ವಶವಾದ
ರ್ತಿ ಬಂದಿದೆ. ಮಿತ್ರರು ಧೈರ್ಯ
ದ ಮುಂದೆ ಸಾಗಲು ಯತ್ನಿಸುತ್ತಿ
ದಂತೆಯೇ ಜರ್ಮನರು ಧೈರ್ಯ
ರ್ಯಕವಾದ ಪ್ರತಿಭಟನೆಯನ್ನೂ
ದ್ದಾರೆ. ಮಿತ್ರಸೇನೆಗಳು ಏಂಟ್
ರ್ಫ ಕಡೆ ಸಾಗುತ್ತಿವೆ. ಈ ಮ
ಯುದ್ಧಾನಂತರ ಜರ್ಮನಿಯ
ಯಾವ ರೀತಿ ಕಾಣಬೇಕೆಂಬ ಬ
ನೂತುಕತೆಗಳಾಗುತ್ತಿವೆ. ಜರ್ಮ
ಯನ್ನು ಕೇವಲ ಒಂದು ವ್ಯವಸಾ
ಯಗಾರರ ನಾಡಾಗಿ ಮಾರ್ಪಡಿಸಬೇ
ಂದು ಬ್ರಿಟನ್ ಅಮೇರಿಕಗಳ ಅಭಿ
ಪ್ರಾಯವಿದ್ದಂತೆ ಕಂಡು ಬಂದಿದೆ. ರ
ಷ್ಯಾವು ಈ ಬಗ್ಗೆ ತನ್ನ ನಿರ್ದಿಷ್ಟ ಮೂ
ರ್ಪನ್ನು ಅನುಸರಿಸುವದೆಂದು ತಿಳಿ
ಬಂದಿದೆ. ಈ ಬಗ್ಗೆ ಮಿತ್ರ ಶಿಬಿರ
ದಲ್ಲಿ ಮುಂದೆ ಭಿನ್ನಾಭಿಪ್ರಾಯಗಳು
ಹುಟ್ಟುವ ಚಿಹ್ನೆಗಳು ಕಂಡು ಬರುತ್ತಿ
ವೆ. ಯುದ್ಧದ ನಂತರದ ಜರ್ಮನಿ
ಯ ಮೂತುಕತೆಗಳು ನಡೆಯುತ್ತಿದ್ದ
ಲೂ ಯೆಯ್ಡ್ ಲಂಡ್ಯವಾಗಲು ಒಹಂ
ನಗಳು ಹಿಡಿಯುವವೆಂದು ಹೇಳಬ
ಹುದು. ಜರ್ಮನಿಯು ತನ್ನಲ್ಲಿ ಗು
ಪ್ತಾಸ್ತ್ರಗಳಿವೆಯೆಂದೂ ಅದನ್ನು ಮುಂ
ಉಪಯೋಗಿಸಲಾಗುವದೆಂದೂ ಈ
ಸೆಗೆ ಹೇಳುತ್ತಾ ಬಂದಿದೆ. ಇದು
ೀವಲ ಅವರನ್ನು ನಂಬಿದವರಿಗೆ ಭರ
ಸಗಾಗಿ ಹೇಳುತ್ತಿದ್ದ ಮಾತೆಂದು ಈ
ವನನ್ನುತ್ತಿದ್ದರು. ಆದರೆ ಪ್ರತ್ಯಕ್ಷ
ರ್ಮನ್ ರಣಕ್ಷೇತ್ರದಿಂದ ಹಿಂತಿರು
ವ ರೂಟರ್ ವಾರ್ತಾ ಸಂಸ್ಥೆಯ
ಪ್ರತಿನಿಧಿಯೊಬ್ಬನು ಜರ್ಮನರು ಹೇ
ಸುತ್ತಿರುವ ಗುಪ್ತಾಸ್ತ್ರಗಳಿರುವದು ನಿ
ಜವೆಂದೂ, ಜನರು ತನ್ನನ್ನು ನಂಬು
ವಂತೆ ಅವರು ಮಾಡಿದ ಪ್ರಚಾರವಲ್ಲ
ವೆಂದೂ ಹೇಳಿರುವನು. ಜರ್ಮನಿ
ಯ ವಿಜ್ಞಾನಿಗಳು ಹೊಸ ಹೊಸ ಶೋ
ಧನೆ ನಡೆಸಿರುವರಂತೆ. ನವೀನ ರೀತಿ
ಯ ಅನೇಕ ಆಯುಧಗಳನ್ನು ತಯಾ
ರಿಸಿರುವರಂತೆ. ಅವು ಸಾಕಷ್ಟು ಪ್ರ
ಮಾಣದಲ್ಲಿ ತಯಾರಾಗಲು ಅವರಿಗೆ ಸ
ಮಯಕೊಟ್ಟರೆ ಮುಂದೆ ಅನಾಹುತ
ವಾಗುವದು. ಆದ್ದರಿಂದ ಆಪತ್ತು
ಬೇಗ ಅವರನ್ನು ಮುರಿದು ಹಾಕಬೇ
ಕೆಂದು ಸೂಚಿಸಿದ್ದಾನೆ. ಪ್ರೇತವಿಮಾ
ನಗಳಲ್ಲಿ ಹೊಸ ಮಾರ್ಪಾಡು ಮಾಡಿ
ಎಷ್ಟು ದೂರಕ್ಕೂ ಕಳುಹಿಸುವ ಬೇ
ಕಾದಾಗ ಹಿಂದಕ್ಕೆ ಕರೆಸುವ ಏರ್ಪಾ
ಡು ಮಾಡುತ್ತಿರುವರಂತೆ. ಇವುಗಳ
ವೇಗವನ್ನು ಗಂಟೆಗೆ 600 ಮೈಲುಗಳ
ವರೆಗೆ ಹೆಚ್ಚಿಸಿರುವರಂತೆ. ಜರ್ಮನ
ರು ಹಾಲೆಂಡ್ ಯುದ್ಧದಲ್ಲಿ ವಿನಾಶಕ
ಕಿರಣಗಳನ್ನು (Death ray) ಉ
ಪಯೋಗಿಸಿದರೆಂದೂ ವರ್ತಮಾನಗಳಿ
ವೆ. ಇವು ನಿಜವಿದ್ದರೆ ಮಿತ್ರರು ಮುಂ
ದೆ ಅನೇಕ ರೀತಿ ಕಷ್ಟ ನಷ್ಟಗಳನ್ನು
ಅನುಭವಿಸಬೇಕಾಗಬಹುದು.

ಈ ಮಧ್ಯೆ ಹಿಟ್ಲರನು ಇರುವ
ನೇ ಎಂದು ಕೆಲವರು ಶಂಕಿಸುತ್ತಿದ್ದಾ
ರೆ. ಈಗ ಅನೇಕ ದಿನಗಳಿಂದ ಅತನ
ವಾರ್ತೆಯೇ ಇಲ್ಲ. ಆತನ ಪ್ರಾಣಾ
ಪಹಾರದ ಪ್ರಯತ್ನ ಮಾಡಿದ ಸಮ
ಯದಲ್ಲಿಯೇ ಆತನು ಮೃತನಾಗಿರಬೇ
ಕೆಂದು ಕೆಲವರು ಊಹಿಸುತ್ತಿದ್ದಾರೆ.
ಆದರೆ ಅಕ್ಟೋಬರ್ ತಾ. 18ರಲ್ಲಿ ಒಂ
ದು ಜಾಹೀರು ಹೊರಡಿಸಿ ಹಿಟ್ಲರನು
ಹೀಗಂದಿದ್ದಾನೆ. 'ಯುದ್ಧ ಪ್ರಾರಂಭಿಸಿ
5 ವರ್ಷಗಳಾದವು. ಶತ್ರುವು ಜರ್ಮನಿ
ಯನ್ನು ನಾಶಮಾಡಲು ಮುಂದರಿ
ಯುತ್ತಿದ್ದಾನೆ. ಆದರೆ ಜರ್ಮನರು
ಧೃತಿಗೆಡುವವರಲ್ಲ. ಶತ್ರುಗಳನ್ನು
ಜರ್ಮನಿಯಿಂದ ಅಲ್ಲ; ಇಡೀ ಯೂ
ರೋಪಿನಿಂದ ಓಡಿಸುವೆವು. ಆದ್ದರಿಂ
ದ 16 ರಿಂದ ಹಿಡಿದು 60 ವಯಸ್ಸಿನ
ವರೆಗಿನ ಎಲ್ಲರೂ ಜರ್ಮನಿಯ ರಕ್ಷಣೆ
ಗಾಗಿ ಸಿದ್ಧರಾಗಬೇಕು' ಎಂದಿದ್ದಾನೆ.
ಕಡೆ ವರೆವಿಗೂ ತಮ್ಮ ಸರ್ವಸ್ವವನ್ನು
ತ್ಯಾಗಮಾಡಿ ಯುದ್ಧ ಮಾಡುವ ಏ
ರ್ಪಾಡನ್ನು ಜರ್ಮನರು ಮಾಡುತ್ತಿ
ದ್ದಾರೆ.

ಇತ್ತ ಮಿತ್ರರು ಜಪಾನರ ಮೇಲೆ
ಧಾಳಿ ಪ್ರಾರಂಭಿಸಿದಂತೆ ಕಂಡುಬರು
ತ್ತದೆ. ಫಿಲಿಫೈನ್ ನಡುಗಡ್ಡೆಗಳ
ಮೇಲೆ ಬಂದು ಮಿತ್ರರು ಇಳಿದು
ಹೋರಾಡುತ್ತಿದ್ದಾರೆ. ಜಪಾನರು
ಬಹು ಪ್ರಚಂಡವಾದ ಪ್ರತಿಭಟನೆಯ
ನ್ನು ಮಾಡುತ್ತಿರುವರಂತೆ. ಜಪಾನು
ಯುದ್ಧಕ್ಕಿಳಿಯುವಾಗ ಪರ್ಲ್‌ಬಂದರ
ದ ಮೇಲೆ ಆಸಿರೀಕ್ಷಿ ಧಾಳಿಮಾಡಿ ಅ
ಮೇರಿಕನರಿಗೆ ಮಾಡಿದ ನಷ್ಟಕ್ಕಿಂತ
ಲೂ ಈಗ ಹೆಚ್ಚಿನ ನಷ್ಟವನ್ನು ಮಿತ್ರ
ದಳಗಳಿಗೆ ಮಾಡಿರುವದಾಗಿ ಜಪಾನರ
ವಾರ್ತೆಯಿದೆಯಂತೆ. ಇದು ಎಷ್ಟು
ನಿಜವೋ ತಿಳಿಯದು. ಏನು ನಷ್ಟ
ವಾದರೂ ಮಿತ್ರರು ಫಿಲಿಫೈನಿನಲ್ಲಿ ಇ
ಳಿದಿದ್ದಾರೆ. ಈಗ ಬರುತ್ತಿರುವ ವಾ
ರ್ತೆಗಳಂತೆ ಅವರು ಮುಂದರಿಯುತ್ತ
ಲೂ ಇರುವರು. ಫಿಲಿಫೈನ್ ದ್ವೀಪ
ಸಮೂಹವೆಂದರೆ ಒಂದೆರಡು ದ್ವೀಪಗ
ಳಲ್ಲ. ಇಲ್ಲಿ 7000 ದ್ವೀಪಗಳಿವೆ. ಇ
ವುಗಳಲ್ಲಿ ಮಿತ್ರರು ಮೂರು ದ್ವೀಪಗ
ಳನ್ನು ಈಗ ವಶಪಡಿಸಿಕೊಂಡಿರುವದಾಗಿ
ವಾರ್ತೆಯಿದೆ. ಮಿತ್ರದಳಗಳು ಕ್ರ
ಮಕಃ ಜಪಾನಿನ ಹತ್ತಿರ ಬರುತ್ತಿವೆ.

ಈ ಮಧ್ಯೆ ಜಪಾನರು ಶೀಘ್ರದ
ಲ್ಲೇ ಭಾರತದ ಮೇಲೆ ದಂಡೆತ್ತಿ ಪುನ
ಹ ಬರುವರೆಂಬ ಸುದ್ದಿಯಿದೆ. ಬ
ರ್ಮಾಗಡಿಯಲ್ಲಿ ಮಿತ್ರರು ಜಪಾನರ
ನ್ನು ಹಿಮ್ಮೆಟ್ಟಿಸಿ ಟೆಡ್ಡಿಮ್ ಗಡಿಯ ಆ
ಚೆ ಓಡಿಸಿರುವರು. ಫಿಲಿಫೈನಿನಲ್ಲಿ
ಮಿತ್ರರು ಹೊಸ ಧಾಳಿ ಪ್ರಾರಂಭಿಸಿರು
ವಾಗ ಮತ್ತು ಚೀನಾ ಯುದ್ಧ ಮುಗಿ
ಯದೆ ಇನ್ನೂ ನಡೆದಿರುವಾಗ ಅವರು
ಭಾರತದ ಮೇಲೆ ಹೇಗೆ ಪುನಹ ಬಂ
ದಾರೆಂಬುದು ಸಂಶಯದ ಮೂತಾದ
ರೂ ಜಪಾನರು ಪುನಹ ಭಾರತದ
ಮೇಲೆ ಧಾಳಿ ಮಾಡಿದರೆ ಆಶ್ಚರ್ಯ
ಪಡಲು ಕಾರಣವಿಲ್ಲ. ಯಾಕೆಂದರೆ
ಮಿತ್ರರು ಜಪಾನಿನತ್ತ ದೃಷ್ಟಿಯಿಟ್ಟು
ಸಾಗುತ್ತಿರುವಾಗ ಅವರ ದೃಷ್ಟಿಯನ್ನು
ನ್ನು ಬೇರೆಡೆಗೆ ಹರಿಸಲು ಈ ರೀತಿಯ
ಕಾರ್ಯಕ್ರಮವು ಕೈಕೊಳ್ಳಲೂಬಹುದು.
ಹ್ಞೇಗೂ ಯುದ್ಧವು ಇನ್ನೂ ಬಹುಕಾ
ಲ ನಡೆಯಬಹುದು. ಜರ್ಮನಿಯು
ಬೇಗನೆ ಸೋಲುವಂತಿಲ್ಲ; ಇತ್ತ ಜಪಾ
ನೂ ಶಕ್ತಿಗುಂದಿಲ್ಲ. ಅಕ್ಟೋಬರ್
24 ಕ್ಕೆ ಯುದ್ಧ ಮುಗಿಯುವದೆಂಬ
ಟಬೇಟನ ಲಾಮನ ಮಾತು ಮತ್ತು
ಇನ್ನನೇಕರ ಭವಿಷ್ಯವೆಲ್ಲವೂ ಸುಳ್ಳಾ
ಗುತ್ತಾ ಬಂದಿವೆ. ಯುದ್ಧ ಶೀಘ್ರ
ಮುಗಿಯುವದು ಎಂಬ ಈ ವರೆಗಿನ ಆ
ಶೆಗಳೆಲ್ಲವೂ ನಿರಾಶೆಗಳಾಗಿ ಪರಿಣಮಿ
ಸಿವೆ.

..... Navabharat Book Depot Udipi, South India .....

— ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು —

	ರೂ. ಆ.				
ಸುಲಭದಲ್ಲಿ ಇಂಗ್ಲಿಷ್	1.4	ಮೂರು ಪ್ರಹಸನಗಳು	0.14	ವೀರಭೂಮಿ	0.2
ಯುವಕರಿಗೆ ಮತ್ತು ವಯಸ್ಕರಿ		ಸ್ವತಂತ್ರಜೀವನೋಪಾಯ	0.3	ವತ್ಸಲಾ	0.8
ಗೆ ಸುಲಭವಾಗಿ ಇಂಗ್ಲಿಷನ್ನು		ಪುರುಷ ಪಥ	0.4	● ಕವಿತೆಗಳು	
ಅನ್ಯ ಸಹಾಯವಿಲ್ಲದೆ ಕಲಿಸು		ಹೆಂಡ್ತಿ ಗಂಡನಾದರೆ	0.4	ಕಾವ್ಯ ಸಾಮ್ರಾಜ್ಯ	0.12
ವ ಇಂಗ್ಲಿಷ್ ಸ್ವಯಂಬೋಧಿನಿ		● ಕತೆಗಳು		ಮುಗುಳು	0.3
● ನಾಟಕಗಳು		ನಗೆನೋಟಗಳು	0.14	ಶ್ರೀಮುಖ	1.0
ಪ್ರೇಮವಿಜಯ	0.12	ಅನ್ನದೇವರು		ಪುರಂದರದಾಸರ ಕೀರ್ತನೆ	1.0
ದೇಶಭಕ್ತ	1.4	ಮತ್ತು ಇತರ ಕತೆಗಳು	1.0	ಭಗವದ್ಗೀತಾ (ಮೂಲ—	
ಸ್ವಭಿಚಾರಿಣಿ ಯಾರು	0.12	ಭಾರತೀಯ ಕತೆಗಳು	0.14	ಸಿಲ್ಕ್ ಬೈಂಡು)	1.4
ಉಶಲವ	0.5	ನಂದಾದೀಪ	0.10	● ಇತರ ಪುಸ್ತಕಗಳು	
ಸಂಶಯ ಪಿಶಾಚಿ	0.8	ನಾಡಕತೆಗಳು	0-3	ಮುಂದಿನ ದೇವರು	0.3
ರಂಗಭೂಮಿ	0.8	ಕಂಡೂಕಾಣದನೋಟಗಳು	0.8	ರಾಷ್ಟ್ರಸಭೆಯ ಇತಿಹಾಸ	2.8
ಸ್ಪ್ರಕಾಶ	1.12	ನಾರೀ ಹೃದಯ	0.14	ಬಾಲವಾಜ್ಮಯ	0.3
ಧರ್ಮ ಸಂಕಟ	0.4	ಆಂತರಂಗದ ಕತೆಗಳು	0.10	ಮಿತ ಸಂತತಿ	0.8
ಆರೋಗ್ಯ ಪ್ರತಾಪ	0.12	ಪ್ರೇಮಪ್ರಪಾತ	0.6	ನಿಶ್ಚಯ ಜ್ಞಾನ	0.8
ಪಂಚಾರತಿ	0.6	ಆಹುತಿ ಇತ್ಯಾದಿಕತೆಗಳು	0.12	ವಾಪಪೂರಿತ ಮಕ್ಕಳು	1.3
ಪ್ರತೀಕಾರ	0.6	ಲೋಪಾಮುದ್ರೆ	0.6	ಚಿಗುರು	0.6
ಸೇವಾಪಥ	0.3	● ಕಾದಂಬರಿಗಳು		ಇತರ ಪುಸ್ತಕಗಳ ಕೆಟಲಾಗಿಗೆ	
		ಸನ್ಯಾಸಿಯ ಸೋಗಿನಲ್ಲಿ	0.8	2 ಆಣೆ ಸ್ಟಾಂಪಿಟ್ಟು ಬರೆಯಿರಿ	

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್, ಪಬ್ಲಿಷರ್ಸ್, **ಉಡುಪಿ,** ದ. ಕ.

1..... Navabharat Book Depot Udipi, South India 1

"ಟ್ರಾಪಿಕಲ್"

ಪಂ. ಮೋತಿಲಾಲ್ ನೆಹರೂ, ಹಕೀಮ್ ಅಜಮಲ್ ಖಾನ್,
ಡಾ. ಯಂ. ಎ. ಅನ್ಸಾರಿ, ಸುಬಾಶ ಚಂದ್ರ ಬೋಸ್
ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,
ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

ಜೀವನ ಸಂಧ್ಯಾ ಕಾಲದಲ್ಲಿ ಜೀವನಿಮೆಯೇ ನಿಮ್ಮನ್ನು ರಕ್ಷಿಸುವದು. ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ **ಟ್ರಾಪಿಕಲಿನಲ್ಲಿ** ವಿಮೆ ಮಾಡಿರಿ.

ಮುಖ್ಯ ಖಜೇರಿ: **ಹೊಸ ದಿಲ್ಲಿ**] [ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:

ಯಂ. ಯು. ಅಚ್ಚಣ್ಣ, **ಯಂ. ರಂಗನಾಥಶೆಟ್ಟಿ,**
40) ಮಡಿಕೇರಿ. OR **ಬ್ರಾಂಚ್ ಮೇನೇಜರ್,** ಮಂಗಳೂರು.

ಅಖಿಲ ಕೊಡಗು ಜವುಳಿ ವ್ಯಾಪಾರಿಗಳ ಸಂಘ, ಮಡಿಕೇರಿ.

ಈ ಮೂಲಕ ಸಂಘದ ಮೆಂಬರುಗಳಿಗೂ ಮತ್ತು ಈ ವರೆಗೆ ಮೆಂಬರಾಗದ ವ್ಯಾಪಾರಿಗಳಿಗೂ ತಿಳಿಯಪಡಿಸುವುದೇನೆಂದರೆ—

ಈ ಸಂಘದ ವಿಶೇಷ ಮಹಾಸಭೆಯು ತಾ. 19—10—44ರಲ್ಲು ವೀರಾಜಪೇಟೆಯಲ್ಲು ನಡೆದು ಈ ಕೆಳಗಿನ ಠರಾವುಗಳು ಪಾಸಾಗಿವೆ.

1. ಕೊಡಗಿಗೆ ಸಿಕ್ಕುವ ಕೋಟಾ ಬಟ್ಟೆಯನ್ನು ತೆಗೆದುಕೊಳ್ಳಲು ಹಣ ವಸೂಲಾತಿ ವಿಷಯ ಚರ್ಚೆ ಮಾಡಿ ಈಗ 1 ಲಕ್ಷ ರೂಪಾಯಿ ಬೇಕೆಂತಲೂ, ಇದಕ್ಕೆ ವ್ಯಾಪಾರಸ್ಥರೆಲ್ಲರೂ ಸೇರಿ ಅವರ ವರ ಶಕ್ತ್ಯನುಸಾರ ಹಾಕಬೇಕೆಂತಲೂ ಎಂದರೆ ಎ—ಬಿ—ಸಿ ಎಂದು ವ್ಯಾಪಾರಸ್ಥರನ್ನು ಮೂರು ತರಗತಿ ಮಾಡಿ ಎ ತರಗತಿಯವರು ರೂ. 1000, ಬಿ ಯವರು ರೂ. 500, ಸಿ ಯವರು ರೂ. 250 ಹಾಕಬೇಕೆಂತಲೂ ತೀರ್ಮಾನಿಸಿದಲ್ಲು ಹಾಜರಿದ್ದ ಮೆಂಬರುಗಳ ಲೆಕ್ಕ ತೆಗೆದಲ್ಲು ರೂ. ಐವತ್ತು ಸಾಸಿರದ ಅಂದಾಜು ಬಂದಿದೆ. ಹಾಜರಾಗದ ಮೆಂಬರುಗಳು ಒಡನೆ ತಮ್ಮ ಅಭಿಪ್ರಾಯವನ್ನು ಗೌ. ಕಾರ್ಯದರ್ಶಿಯವರಿಗೆ ತಿಳಿಸಬೇಕಿದೆ. ಮತ್ತು ಮೆಂಬರಾಗದ ವ್ಯಾಪಾರಸ್ಥರು ಒಡನೆ ಸಂಘಕ್ಕೆ ರೂ. 6ನ್ನು ಕಳುಹಿಸಿ ಮೆಂಬರಾಗಿ ಕೋಟಾ ಬಟ್ಟೆ ತೆಗೆದುಕೊಳ್ಳಲಿರುವ ಹಣದ ಮಟ್ಟಿಗೆ ತಮ್ಮ ಅಭಿಪ್ರಾಯವನ್ನು ಒಡನೆ ತಿಳಿಸಬೇಕಿದೆ. ತಪ್ಪಿದರೆ ತಮಗೆ ಸಿಕ್ಕುವ ಕೋಟ ಬಟ್ಟೆಯ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಪ್ರತಿಯೊಬ್ಬ ವ್ಯಾಪಾರಸ್ಥರೂ ತಾ. 5—11—44ರ ಒಳಗೆ ತಮ್ಮ ಹಣವನ್ನು ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಮಡಿಕೇರಿ, ಹಾಗೂ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ವೀರಾಜಪೇಟೆ ಇವುಗಳಿಗೆ ಕಳುಹಿಸಬಹುದು. ಲೆಕ್ಕವು ಸರಿಯಾದ ಪೈಸಿಡೆಂಟರ ಹೆಸರಿನಲ್ಲಿರುವುದು. ಇದನ್ನು ಪೈಸಿಡೆಂಟರು ಮತ್ತು ವೈಸ್ ಪೈಸಿಡೆಂಟರು ಸೈನ್ ಮಾಡಿ ತೆಗೆಯಬಹುದು.

2. ಕೊಡಗಿಗೆ ಜೋಟಾ ಬಟ್ಟೆ ಸಿಗುವ ವರೆಗೆ ಬೆಂಗಳೂರು, ಮೈಸೂರು, ಮಲಬಾರು ಮತ್ತು ಮಂಗಳೂರು ಮಿಲ್ಲು ಮತ್ತು ಗಡಂಗಗಳಿಂದ ಮೊದಲಿನಂತೆ ನಮಗೆ ಬಟ್ಟೆ ಸರಬರಾಯಿ ಮಾಡಲು ಸಿಫಾರಸು ಮಾಡುವಂತೆ ಸ್ಥಳೀಯ ಸರಕಾರವನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು.

3. ಕೊಡಗಿಗೆ ತರುವ ಮಿಲ್ಲು ಬಟ್ಟೆಗಳ ಮೇಲೆ ವೈವಾಟದ ಖರ್ಚು ಮತ್ತು ಇನ್ನಿತರ ಖರ್ಚುಗಳು ಹೆಚ್ಚಿಗೆ ಬೀಳುವುದರಿಂದ ಚಿಕ್ಕ ಕ್ರಯದ ಮೇಲೆ (Retail rate) ಕನಿಷ್ಟ ಪಕ್ಷ 8% ಹೆಚ್ಚಿಗೆ ಹಾಕಿ ಮಾರುವಂತೆ ಹುಕುಂ ಕೊಡಬೇಕೆಂದು ಸ್ಥಳೀಯ ಸರಕಾರವನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು.

ವ್ಯಾಪಾರಸ್ಥರು ಈ ಮೇಲಿನ ತೀರ್ಮಾನದಂತೆ ನಡೆದು ತಮಗೆ ಸಿಕ್ಕುವ ಕೋಟಾ ಬಟ್ಟೆಯನ್ನು ತೆಗೆದುಕೊಳ್ಳಲು ಒಡನೆ ಹಣ ಕಳುಹಿಸಬೇಕಾಗಿ ಕೇಳಿಕೊಳ್ಳುತ್ತೇನೆ. ತಪ್ಪಿದರೆ ಅವರಿಗೆ ಬರುವ ತೊಂದರೆಗೆ ಸಂಘದವರು ಜವಾಬ್ದಾರರಲ್ಲ.

ಮಡಿಕೇರಿ, **ಕೆ. ಕೆ. ತಿಮ್ಮಯ್ಯ,**
ತಾ. 25.10.44. ಗೌ. ಕಾರ್ಯದರ್ಶಿ.

The Canara Banking Corporation Limited.
(Incorporated in British India)
ETD— Head Office—UDIPI, (S. K.) —1906
Paid up capital .. .. .. *Rs. 14,38,255*
Reserves .. .. *Rs. 4,10,000*
Total working Resources .. .. *Exceed Rs. 1 Crore*
ANNOUNCEMENT.
A Branch of the Bank has been opened on 24-10-44 at B O M B A Y.
2)

— ಶು ಭಾ ಶ ಯ ಗ ಳು —
ಕೊಚ್ಚಿಕಾರ್ ಬ್ರದರ್ಸ್, ಲಿ.
ಮುಖ್ಯ ಏಜಂಟರು.
ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.
6)
ಎಲ್ಲಾ ಪಾಲಿಸಿದಾರರಿಗೂ, ಏಜೆಂಟರಿಗೂ, ವೈದ್ಯ ಪರೀಕ್ಷಕರಿಗೂ ಮತ್ತು ಹಿತಚಿಂತಕರಿಗೂ ತಮ್ಮ
ದೀಪಾವಳಿ
ಶುಭಾಶಯಗಳನ್ನು ಬಯಸುತ್ತಾರೆ.

ಧಾತು ವೃದ್ಧಿ ರಸಾಯನ (ZANDU)
" ರ್ಯಾಕ್ಯೋ—ಫಾಸ್‌ಫೋ—ಮೂಲ್ಟ್ "
ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.
ಈ ರಸಾಯನ } ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.
ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯಾಗಿರುವುದು. ಇದರಲ್ಲಿ ನವಜೀವಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನೆ ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ.
ಇದರಲ್ಲಿ ಇಲೆಕ್ಟಿರ್ ಪಾಸ್‌ಫೋಮೂಲ್ಟ್, ಹೆಸೋಗ್ಲೋಬಿನ್, ಸೋದಿಗ್ಲಿಸರೊ ಫಾಸ್‌ಫೇಟ್ ಪೆಪ್ಸಿನ್, ಸಾಲ್, ಮೂಲ್ಟ್ ಎಕ್ಸ್‌ಟ್ರಾಕ್ಟ್, ದಾಕ್ಟಾಸವೆ ಮೊದಲಾದ ಪ್ರಸಿದ್ಧ ಔಷಧಿಗಳಂಶವಿದೆ. ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧ ಷಾಪುಗಳಲ್ಲಿದೆ.
ಝುಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,
ಗೋಖಲೆ ರೋಡ್, ಬೋಂಬೆ.
8)

ಎಂಪೈರ್ ಆಫ್ ಇಂಡಿಯಾ
ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
44) ಸ್ಥಾಪನೆ:—೧೮೯೭.

ಳಪನೇ ವಾರ್ಷಿಕವ	ಒಟ್ಟು ಆದಾಯ	೯೭,೩೭,೦೦೦ ಮೀರಿದೆ
ರದಿಯಲ್ಲಿನ ಕೆಲವು	ಚಾಲ್ತಿಯಿರುವ ವಿಮೆ	೧೬,೪೯,೮೮,೦೦೦ ,,
ಸ್ಪಷ್ಟ ಸಂಗತಿಗಳು.	ಆಸ್ತಿ	೬,೫೦,೪೬,೦೦೦ ,,
	ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು	೪,೫೮,೦೦,೦೦೦ ,,

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,	ಅರ್ಜಿಗಳನ್ನು	ಎಂಪೈರ್ ಆಫ್ ಇಂಡಿಯಾ
ಕೆಂಪೇಗೌಡ ರಸ್ತೆ, ಬೆಂಗಳೂರು.	ಸ್ವಾಗತಿಸಿದೆ.	ಲೈಫ್ ಬಿಲ್ಡಿಂಗ್ ಬೋಂಬೆ

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.
ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.
ವಸೂಲಾದ ಶೇರ್ ಮೊಬಲಗು ರೂ. 95,060, ಜಮೂ ಬಂದ ಶೇವಣಾತಿ 2,24,750 ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.
ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಶೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 2. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಆದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

ಮಹದೇವ ದೇಸಾಯಿಯವರ ಜೀವನ ಚರಿತ್ರೆ.

ದಿವಂಗತ ಮಹದೇವ ದೇಸಾಯಿಯವರ ಜೀವನ ಚರಿತ್ರೆಯನ್ನು ಮಹಾತ್ಮ ಗಾಂಧಿಯವರು ಪೂರ್ತಿಯಾಗಿ ಬರೆಯುವರು ಎಂಬುದಾಗಿ ಗುಜರಾತ್ ಸಮಾಚಾರ ಪತ್ರಿಕೆಯು ತಿಳಿಸುತ್ತದೆ. ಆಗಾಖಾನ್ ಅರಮನೆಯಲ್ಲಿ ಗಾಂಧೀಜಿ ಬಂಧನದಲ್ಲಿದ್ದಾಗ ಅವರು ಈ ಪುಸ್ತಕಕ್ಕೆ ಸಂಬಂಧಪಟ್ಟ ೫೦ ಪುಟಗಳನ್ನು ಬರೆದಿದ್ದರು. ಈ ಪುಸ್ತಕ ರಚನೆಗೆ ಬೇಕಾದ ವಿಷಯಗಳನ್ನು ಶ್ರೀ ಮಹದೇವ ದೇಸಾಯಿಯವರ ಮಿತ್ರರು ಒದಗಿಸಿಕೊಡುವರು.

—೦೦—

ಇನ್ನೂರು ವರ್ಷಗಳ ನಂತರ.

ಮುಸ್ಲಿಮರ ಸಂಖ್ಯೆ ಹಿಂದೂಗಳ ಸಂಖ್ಯೆಯನ್ನು ಮೀರಬಹುದು.

ಹಿಂದೂದೇಶದಲ್ಲಿ ಹಿಂದೂಗಳ ಸಂಖ್ಯೆ ವರ್ಷಗಳೆದಂತೆ ಕ್ಷೀಣಿಸುತ್ತಾ ಬರುತ್ತಿದೆ. ಮುಸ್ಲಿಮರದು ವೃದ್ಧಿಯೊಗುತ್ತಿದೆ. ಇದೇ ರೀತಿಯಲ್ಲಿ ವಿದ್ಯಮಾನಗಳು ಮುಂದುವರಿಯುವುದಾದರೆ ಇನ್ನು ಎರಡು ಶತಮಾನಗಳಲ್ಲಿ ಮುಸ್ಲಿಮರ ಸಂಖ್ಯೆಯು ಹಿಂದೂಗಳ ಸಂಖ್ಯೆಯನ್ನು ಮೀರಬಹುದು; ಕನಿಷ್ಟ ಪಕ್ಷಕ್ಕೆ ಸರಿಸಮಾನವಾಗುವುದು ನಿಶ್ಚಯ.

ಕಳೆದ ೬೦ ವರ್ಷಗಳ ಖಾನೇಸುಮಾರಿಯನ್ನು ಪರಿಶೀಲಿಸಿದರೆ ಹಿಂದೂಗಳ ಸಂಖ್ಯೆ ದಶಮಾನಗಳೆದಂತೆ ಕ್ಷೀಣಿಸುತ್ತಿರುವುದೂ ಮುಸ್ಲಿಮರ ಸಂಖ್ಯೆ ಏರುತ್ತಿರುವುದೂ ತಾನಾಗಿ ತಿಳಿಯುತ್ತಿದೆ. ೧೮೮೧ರಲ್ಲಿ ಹಿಂದೂಗಳ ಸಂಖ್ಯೆಯು ಪ್ರತೀ ೧೦,೦೦೦ಕ್ಕೆ ೭,೪೩೨ ರಷ್ಟಿತ್ತು. ೧೯೪೧ರಲ್ಲಿ ಈ ಸಂಖ್ಯೆ ೬,೯೯೩ ರಷ್ಟಾಯಿತು; ಆಂದರೆ ೧೦,೦೦೦ಕ್ಕೆ ೬೯೩ ರಂತೆ ಇಳಿದಂತಾಯಿತು. ಇದಕ್ಕೆ ವ್ಯತಿರಿಕ್ತವಾಗಿ ಮುಸ್ಲೀಮರ ಸಂಖ್ಯೆಯು ಅಷ್ಟೇ ಅವಧಿಯೊಳಗೆ ೧,೯೭೪ ರಿಂದ ೨,೫೧೧ ಕ್ಕೆ ಏರಿದೆ. ಎಂದರೆ ೧೦,೦೦೦ ದಲ್ಲಿ ೪೦೭ ಏರಿದಂತಾಯಿತು.

ಇಡೀ ದೇಶದ ದೃಷ್ಟಾಂತ ಪರಿಶೀಲಿಸುವುದಾದರೆ ಮೂತ್ಯ ಈ ಇಳಿತ ಕಂಡುಬರ್ದುವುದಲ್ಲ. ಪ್ರಾಂತ್ಯವಾರು ವಿಂಗಡಿಸಿದರೂ ಇಳಿತದ ಚಿಹ್ನೆಯೇ ಪ್ರಧಾನವಾಗಿ ತೋರುತ್ತದೆ. ಇದರ ಸತ್ಯಾಸತ್ಯತೆಗಳನ್ನು ಈ ಕೆಳಗಿನ ತಪ್ಪಿಯಿಂದ ಸುಲಭವಾಗಿ ಕಂಡು ಹಿಡಿಯಬಹುದು.

ಪ್ರತೀ ೧೦,೦೦೦ ಕ್ಕೆ

ಪ್ರಾಂತ್ಯಗಳು ಮುಸ್ಲಿಮರು ಹಿಂದೂಗಳು.

	೧೮೮೧	೧೯೪೧	೧೮೮೧	೧೯೪೧
ಬಂಗಾಳ	೫೦೯	೫೪೭೩	೪೮೫೫	೪೧೫೫
ಪಂಜಾಬು	೫೫೫೩	೫೭೦೭	೩೦೪೪	೨೬೫೭
ಯು. ಪಿ.	೧೫೪೩	೧೫೫೦	೮೬೨೭	೮೩೨೬
ಬಿಹಾರ್	೧೦೪೯	೧೨೪೯	೪೪೫೦	೭೫೯೬
ಮದ್ರಾಸು	೬೨೩	೭೯೦	೯೧೪೧	೮೬೭೪

೨೦೦ ವರ್ಷಗಳ ನಂತರ.

೧೮೮೧ ರಲ್ಲಿ ಆಂದರೆ ೬೦ ವರ್ಷಗಳ ಹಿಂದೆ ಹಿಂದೂ ಮುಸ್ಲೀಮರ ಪಂಖ್ಯೆಯ ಪ್ರಮಾಣ ೪:೧ ಇತ್ತಾದರೆ ಈಗ ಅದು ೩:೧ ಈ ಪ್ರಮಾಣದಲ್ಲಿದೆ. ಆದುದರಿಂದ ಇದೇ ಪ್ರಮಾಣದಲ್ಲಿ ಇಳಿತ ಭರತಗಳು ನಡೆದು ಹೋದರೆ ಇನ್ನು ೨೦೦ ವರ್ಷಗಳ ನಂತರ ಪ್ರಮಾಣ ಸರಿಸಮಾನ ಇಲ್ಲವೆ ಮುಸ್ಲೀಮರ ಕಡೆಗೆ ಒಂದಿಷ್ಟು ಅಧಿಕವಾಗಿ ರೂಪಾಂತರ ಹೊಂದಬಹುದು.

ನ. ಭಾ.

—೦೦—

'ಕಸ್ತೂರಿ ಬಾ ನಿಧನ.'

(ಶ್ರೀ. ಪಿ. ಎ. ಬೋಪಯ್ಯ, ಉಪಾಧ್ಯಾಯರು, ತರಬೇತು ಶಾಲೆ, ಮಡಿಕೇರಿ.) (ವೀರಚಾಸ್ತ್ರ

ಭಾರತದ ಬಡಜನರ ದುಗ್ಗಿತಿಗೆ ಮನತರುಗಿ
ಪಾರತಂತ್ರ್ಯವ ಬಿಡಿಸಿ ಸ್ವಾತಂತ್ರ್ಯಕ್ಕಾಗಿ
ನಾರಿ 'ಕಸ್ತೂರಿ ಬಾ' ಸೆರೆಯೊಳ್ಬಂಧಿತಳಾಗಿ
ಭಾರತಿಯ ಬಂಧನದ ಮುಕುತಿಗಾಗಿ ॥೧॥

ತನ್ನ ತನುಮನ ಧನವ ಜನಕೆಧಾರೆಯನೆರೆದು
ಬೆನ್ನ ಹಿಡಿದಳು ಪತಿಯ—ಸುಖವ ತೊರೆದು
ಮನ್ನಿಸದ ಪರಹಿಂಸೆಗೆದೆಗೊಟ್ಟು ಮುನ್ನಡೆದು
ತನ್ನ ಹರಿಯವ ಕಳೆದಳ್ಸೆರೆಯೊಳಿದ್ದು ॥೨॥

ಬಡಜನರ ಸೇವೆಯಿಂ ಸಗ್ಗ ತನಗಹುದೆಂದು
ಬಡಜನೋದ್ಧಾರದಿಂ ನಿತ್ಯಸುಖವೆನ್ನಿದು
ನುಡಿಯ ಸಾಧಿಸುತವಳು ಸೆರೆಯಮನೆಯೊಳಂದು
ಸಡಗರದಿ ಮೃಡನ ಭಜಿಸುವರಾತ್ರಿಯಂದು ॥೩॥

ಶಿವನಧ್ಯಾನವ ಗೈವ ಶಿವನಪೂಜೆಯ ನೂಡ್ವ
ಶಿವನ ನಾಮಾವಳಿಯ ಕೂಡಿ ಪಾಡ್ವ
ಶಿವನಾಮ ಶರಧಿಯಲಿ ಈಜ್ತೇಲಿಸುಣುಗಾಡ್ವ
ಶಿವಶಿವೆನ್ನುತ ಬೇಡ್ವ ನಿದ್ದೆಯನು ದೂಡ್ವ ॥೪॥

ಎರಡನೆಯ ಮೂಸಿಪ್ಪತ್ತೆರಡನೆಯ ದಿವಸ
ಧರೆಯೊಳಿಗೆ ದುಃಖಮಳೆ ಭೋರ್ಗರೆದ ದಿವಸ
ಪರಿದು ನಡೆದುದು ಎಪ್ಪತ್ತೈದನೆಯ ವರ್ಷ
ತರುಣಿ ಕಸ್ತೂರಿಗಂ ಸೆರೆಮನೆಯವಾಸ ॥೫॥

ಆಗಖಾನ್ ಅರಮನೆ, ಸೆರೆಮನೆಯು ಕಾನಲಲಿ
ತಾಗಿ ತಂತಕನ ಕಂಗಳವು 'ಬಾ' ಳಲ್ಲಿ
ಜಾಗು, ನಡೆ ಸಗ್ಗಕ್ಕೆ ಬೆಳಗನುರ ಪಂಜ್ರಯಲ್ಲಿ
ನೀಗು ನಿನ್ನಸುವೆಂದ ವಿಧಿ ಹರುಷದಲ್ಲಿ ॥೬॥

ವಿಧಿಯ ವಿಪರೀತವಾರು ? ರೋಧಿಸಲು ಕೇಳುವನೇ
ಎದೆಯೂಡ್ವೆ ಅಳುವ ಶಿಶುಗೆನಲುತಾ ಬಿಡುವನೆ ?
ಮುದದಿ ನಾ ನೂತಾಡಿ ಬಹೆನು ಇನಿಯನ್ನ ವಡನೆ
ಕದಲೆನಿಲ್ಲಿಗು ಸತ್ಯ ಎನೆ ಬಿಡುವನವನೆ ? ॥೭॥

ವಿಧಿಯೂಣತಿಗೆ ಬಾಗಿ ಕುದಿದು ಹುಸುಸದಿ ನಲಿದು
ಮುದದಿ ಜೀತಿಯನು ಅಂತರಂಗದಲಿ ನೆನೆದು
ಹುದುಗಿರ್ದ ಸ್ವಾತಂತ್ರ್ಯ ಸ್ಫೋಪನನು ಹೊರಗೆಡೆದು
ಮಧುರದಲಿ ಕಸ್ತೂರಿ ನುಡಿದಳಂದಿನಿತು ॥೮॥

ವೀರಸತಿ ಗಾಂಧಿಜಿಯ ಮನಕೆ ಅಗದಿರಲಿ
ಭಾರತೀಯರ ಮನವು ಕದಲದಿರಲಿ
ಭಾರತಾಂಬೆಯ ಜಯದ ಧ್ವಜ ನಲಿಯುತಿರಲಿ
ಭಾರತರು ದಾಸ್ಯದಲಿ ನರಳದಿರಲಿ, ॥೯॥

ಜಾತಿಮತಗಳ ಕಲಹವೇ ಮೊಳೆದೋರದಿರಲಿ
ನೀತಿಯಲಿ ನಾರಿಯರು ಮುನ್ನಡೆಯುತಿರಲಿ
ಸ್ವಾತಂತ್ರ್ಯ ರಣದಿಂದ ಹಿಮ್ಮೆಟ್ಟದಿರಲಿ
ಮೂತಭಾರತಿಯ ಬಂಧನವು ಬಿಡಲಿ ॥೧೦॥

ನಂದಿಹೋಯಿತು 'ಬಾ' ರ ಮಣಿದೀಪಜಾನಿಡೆಗೆ
ಹೊಂದಿತದು ಸಗ್ಗವನು ಉಜ್ವಲಿಸಿ ಬೆಳಗಿ
ಕುಂದಿದರು ಭಾರತರು ನೊಂದುಕಡುಮನದೊಳ್ಳಗೆ
ಆಂದಿನಿಂ ಬೆಳಗಿತದು ಅಮರರೊಳಗೆ ॥೧೧॥

ಉದ್ದಗಲಕ್ಕೆಲ್ಲ ಈ ವಾರ್ತೆ ಪಸರಿಸಿತಂದು
ಬಿದ್ದುಹೊರಳಿದರೆಲ್ಲ 'ಹಾ ಅಮ್ಮ' ಎಂದು
ಅದ್ದಿದರು ತಮ್ಮೊಡಲ ಕಂಬನಿಯೊಳ್ಮಿಂದು
ಹೊದ್ದಿತೇ ಕತ್ತಲೆಯು ಭಾರತದೊಳೆಂದು ॥೧೨॥

ಸೇರಿದರು ಭಾರತರು ಸೆರೆಮನೆಯ ಬಳಿಯಲ್ಲಿ
ವೀರದೇಸಾಯಿಯನು ದಹನಗೈದಲ್ಲಿ
ಮೂರುಕಟ್ಟಗೆಯೊಟ್ಟ ಶವವನಿರಿಸಿದರಲ್ಲಿ
ಧೀರ ಗಾಂಧಿಯೆ ಚಿತೆಯನುರಿಸಿವರು ಅಲ್ಲಿ ॥೧೩॥

ಏಸುಧನ್ಯಳೊ ಜಗದಿ ಕಸ್ತುರ್ಬ ಸ್ತುತ್ಯಂ
ಏಸುಧನ್ಯಳೊ ಪತಿಯೆ ಹರಸಿದನು ನಿತ್ಯಂ
ಈಶಕೃಪೆಯಿಂದಮರ ಲೋಕವಾಯಿತು ಸತ್ಯಂ
ದೇಶಸೇವೆಯಿಂ ಕೀರ್ತಿ ಸ್ಥಿರವಾಯ್ತು ನಿತ್ಯಂ ॥೧೪॥

—೦೦—